ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಲ್ಲಿ ದಿನಗೂಲಿ ನೌಕರರನ್ನು ಖಾಯಂ ಗೊಳಿಸುವ ಬಗ್ಗೆ

೨೬೩೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದ ಆಥವಾ ಅದರ ಸ್ವಾಮ್ಯದ ಯಾವುದೇ ಇಲಾಖೆಯಲ್ಲಾಗಲೀ ದಿನಗೂಲಿ ನೌಕರರೆಂದರೆ ಒಂದೇ ಅಲ್ಲವೆ, ಹಾಗೂ ಆ ನೌಕರರನ್ನೆಲ್ಲಾ ಒಂದೇ ದೃಷ್ಟಿಯಿಂದ ನೋಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ.

ಆ) ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ಸೇವೆಯನ್ನು ಖಾಯಂ ಮಾಡಲು ಸರ್ಕಾರ ತೀರ್ಮಾನ ಕೈಗೊಂಡಿರುವುದು ನಿಜವೆ.

ಇ) ಇದೇ ರೀತಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿರುವ ದಿನಗೂಲಿ ನೌಕರರು ತಮ್ಮನ್ನೂ ಖಾಯಂ ಮಾಡಬೇಕೆಂದು ಹಲವಾರು ವರ್ಷಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿರುವುದು ನಿಜವೆ.

ಈ) ಹಾಗಿದ್ದಲ್ಲಿ ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ಸೇವೆಯನ್ನು ಖಾಯಂ ಗೊಳಿಸುವ ದಿನದಿಂದಲೇ ಇವರ ಸೇವೆಯನ್ನೂ ಖಾಯಂ ಮಾಡಲು ಸರ್ಕಾರದವರು ಕ್ರಮತೆಗೆದು ಕೊಳ್ಳುವರೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಇಲ್ಲ

ಇ) ಹೌದು

ಈ) 'ಆ' ಪ್ರಶ್ನೆಗೆ ನೀಡಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಜಾತಿ ನಿರ್ಮೂಲನೆ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ ಆದರೆ ಮತ್ತೊಂದು ರೂಪದಲ್ಲಿ ದಿನಗೂಲಿ ನೌಕರರುಗಳನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ನೇಮಕ ಮಾಡಿಕೊಂಡು ಜೀತದಾಳುಗಳನ್ನಾಗಿ ಮಾಡತಕ್ಕ ಒಂದು ವ್ಯವಸ್ಥೆ ನಡೆಯುತ್ತಿದೆ. ಸರ್ಕಾರಿ ಸೇವೆಗೆ ದಿನಗೂಲಿ ಆಧಾರದ ಮೇಲೆ ಜನರನ್ನು ನೇಮಿಸಿಕೊಂಡು ೨೨೮ ದಿವಸಗಳು ಪೂರ್ತಿ ಕೆಲಸ ಮಾಡಿದರೆ ಅಂತಹವರನ್ನು ಹೈಕೋರ್ಟು ತೀರ್ಪಿನ ಪ್ರಕಾರ ಖಾಯಂ ಮಾಡಬೇಕಾಗಿರುತ್ತದೆ ಆದರೆ ೨೨೮ ದಿನಗಳು ಆಗುವುದಕ್ಕೆ [illegible] ದಿನಗೂಲಿ ನೌಕರರು ತೊಂದರೆ ಪಡುತ್ತಿದ್ದಾರೆ. ಯಾವುದೇ ರೀತಿಯ ನೋಟೀಸನ್ನು ಕೊಡ ಕೊಡದೆ ತೆಗೆದುಹಾಕಿದ್ದಾರೆ. ಲೋಕಸೇವಾ ಆಯೋಗದಲ್ಲಿ ೭೦ ಜನ ದಿನಗೂಲಿ ನೌಕರರು ಇದ್ದಾರೆ. ಇವರಲ್ಲಿ ಇಬ್ಬರಿಗೆ ಗೌರ್ನರ್ ಅವರಿಂದ ಪರ್ಮಿಷನ್ ಪಡೆದು ಖಾಯಂ ಮಾಡಿದ್ದಾರೆ. ಸರ್ಕಾರದವರು ಒಂದೇ ದೃಷ್ಟಿಯಿಂದ ನೋಡುವುದಾದರೆ, ಇರತಕ್ಕ ದಿನಗೂಲಿ ನೌಕರರನ್ನು ಖಾಯಂ ಮಾಡುತ್ತೀರಾ?

ದಿನಗೂಲಿ ನೌಕರರಿಗೂ ಖಾಯಂ ನೌಕರರಿಗೂ ಕೆಲಸದಲ್ಲಿ ವ್ಯತ್ಯಾಸ ಇಲ್ಲ. ಆದರೆ ಸಂಬಳದಲ್ಲಿ ಸವಲತ್ತುಗಳಲ್ಲಿ ವ್ಯತ್ಯಾಸ ಇದೆ. ದಿನಗೂಲಿಯಲ್ಲಿರತಕ್ಕವರಿಗೆ ೧೫ ರೂಪಾಯಿ ಕೊಡುವಂಥಾದ್ದು ಇದೆ. ಈಗ ಅವರು ಅವರದೇ ಆದಂಥ ಅಸೋಸಿಯೇಷನ್ ಮಾಡಿ ಕೊಂಡಿದ್ದಾರೆ. ಅವರನ್ನು ಖಾಯಂ ಮಾಡುವ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಕರ್ನಾಟಕ ನಗರ ನೀರು ಸರಬರಾಜು ಮಂಡಲಿಯಲ್ಲಿ ದಿನಗೂಲಿ ಹೆಸರಿನಲ್ಲಿರುವವರು ಇಲ್ಲ. ತಿಂಗಳಿಗೆ ೨೬ ದಿವಸ ಆಥವಾ ಪ್ರತಿ ದಿವಸಕ್ಕೆ ೧೫ ರೂಪಾಯಿ ಕೊಡುವಂಥಾದ್ದು ಇಲ್ಲ ನೇಮಕಾತಿಯನ್ನು ಪ್ರಾರಂಭದಲ್ಲಿಯೇ ಮಾಡಿಕೊಂಡಿದ್ದಾರೆ. ಟೈಮ್‌ಬೌಂಡ್ ಸ್ಕೇಲ್‌ನಲ್ಲಿ ರೆಗ್ಯುಲರೈಸ್ ಮಾಡಿದ್ದಾರೆ. ಆಯಾಯ ಹುದ್ದೆಯಲ್ಲಿರತಕ್ಕವರಿಗೆ ಕನಿಷ್ಟ ವೇತನವನ್ನು

ತಿಂಗಳ ಸಂಬಳದ ರೂಪದಲ್ಲಿಯೆಗೆ ಕೊಡಲಾಗುತ್ತಿದೆ. ಅವರ ಬೇಡಿಕೆ ಏನು ಇದೆ ಅಂದರೆ ಆಯಾಯ ಹುದ್ದೆಯಲ್ಲಿರತಕ್ಕವರನ್ನು ಪೂರ್ಣವಾಗಿ ಖಾಯಂ ಮಾಡಬೇಕು ಬಡ್ತಿ ವ್ಯವಸ್ಥೆ ಮಾಡಬೇಕೆಂದು ಇದೆ. ಪಿ. ಡಬ್ಲ್ಯು ಡಿ ಯಲ್ಲಿ ಇದ್ದಹಾಗೆ ದಿನಗೂಲಿ ನೌಕರರಂ ಈ ಮಂಡಲಿಯಲ್ಲಿ ಇಲ್ಲ. ೨೧ನೇ ತಾರೀಖು ನೌಕರರ ಸಂಘ ನಮ್ಮ ಮಂಡಲಿಯವರ ಜೊತೆ ಚರ್ಚೆ ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದಾರೆ ಇನ್ನೂ ಅವರ ಕೆಲವಾರು ಬೇಡಿಕೆಗಳು ಏನಿವೆ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಮಾನ್ಯಮಂತ್ರಿಗಳು ದಿನಗೂಲಿ ನೌಕರರನ್ನು ಖಾಯಂ ಮಾಡತಕ್ಕದ್ದು ಸರ್ಕಾರದ ಅಭಿಪ್ರಾಯದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಈಗ ಈ ಲೋಕಸೇವಾ ಆಯೋಗದಲ್ಲಿ ಕೆಲಸ ಮಾಡತಕ್ಕ ದಿನಗೂಲಿ ನೌಕರರನ್ನು ಯಾವರೀತಿ ಖಾಯಂ ಮಾಡಿದಿರಿ ? ಉಳಿದ ಇಲಾಖೆಯಲ್ಲಿರತಕ್ಕವರನ್ನು ಖಾಯಂ ಮಾಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ಎಂ. ಚಂದ್ರಶೇಖರ್.—ಲೋಕಸೇವಾ ಆಯೋಗದ್ದು ನನಗೆ ಅರ್ಥ ಆಗಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ನಗರ ನೀರು ಸರಬರಾಜು ಮಂಡಲಿಗೂ ಅದಕ್ಕೂ ಸಂಬಂಧ ಇಲ್ಲ. ಅದರ ಬಗ್ಗೆ ತಾವು ಬೇರೆ ಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಈಗ ತಾವು ಒಂದೇ ದೃಷ್ಟಿಯಲ್ಲಿ ನೋಡುತ್ತೇವೆಂದು ಹೇಳಿದ್ದೀರಿ. ೧೫ ರೂಪಾಯಿ ಪ್ರಕಾರ ಕಡಿಮೆ ಸಂಬಳದಲ್ಲಿ ದಿನಗೂಲಿ ಮೇಲೆ ನೇಮಕ ಮಾಡಿಕೊಂಡಿದ್ದಾರೆ. ಅತೀ ಕಡಿಮೆ ಸಂಬಳದಲ್ಲಿ ಒಬ್ಬವ್ಯಕ್ತಿಯಿಂದ ದುಡಿಸಿಕೊಳ್ಳುವುದು ಶೋಷಣೆಯಾಗುತ್ತದೆ. ಈ ವಿಚಾರದ ಸರ್ಕಾರಕ್ಕೆ ಮಾನವೀಯತೆ ಇರಬೇಕು. ಈ ದೃಷ್ಟಿಯಿಂದಲಾದರೂ ಈ ದಿನಗೂಲಿ ನೌಕರರನ್ನು ಖಾಯಂ ಮಾಡಿ. ಸರ್ಕಾರಿ ನೌಕರರಿಗೆ ಕೊಡತಕ್ಕ ಎಲ್ಲ ಸೌಲಭ್ಯಗಳನ್ನು ಕೊಡತಕ್ಕ ಮನಸ್ಸು ಮಾಡಬೇಕು. ಆ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕು. ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಸಂಘದವರು ಈ ಬಗ್ಗೆ ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿದ್ದಾರೆ ಆದ್ದರಿಂದ ದಯಮಾಡಿ ತಾವು ಇದರ ಬಗ್ಗೆ ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ನಾನು ಈ ಮಂಡಲಿಗೆ ಸಂಬಂಧಪಟ್ಟಂತೆ ಮಾತ್ರ ಹೇಳುತ್ತೇನೆ. ಮಂಡಲಿಯಲ್ಲಿ ದಿನಗೂಲಿಯವರು ಯಾರೂ ಇಲ್ಲ. ಅವರಿಗೆ ಉದ್ಯೋಗ ಖಾಯಂ ಆದ ಹಾಗೆಯೆ. ಈಗ ಅವರಿಗೆ ತೆಗೆಯುವುದಿಲ್ಲ. ಟೈಮ್‌ಬೌಂಡ್ ಸ್ಕೇಲ್ ಕೊಟ್ಟ ಹೇಲೆ ತೆಗಯುವ ಹಾಗೆ ಇಲ್ಲ. ಮುಂದಿನ ಬಡ್ತಿ ಮುಂತಾದ್ದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅದರ ಬೇಡಿಕೆ ಇದೆ. ಅದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ ೨೧ನೇ ತಾರೀಖಿನ ಸಭೆಯಲ್ಲಿ ಅವರ ಬೇಡಿಕೆಗಳು ಏನಿವೆ ಅದರ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಮಂತ್ರಿಗಳ ಜವಾಬ್ದಾರಿಯೂ ಇದರಲ್ಲಿ ಇದೆ...

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಾನು ಮೂರು ಸಾರಿ ಅವಕಾಶ ಮಾಡಿಕೊಟ್ಟಿದ್ದೇನೆ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು,

ಅಧ್ಯಕ್ಷರು.—ಈ ಪ್ರಶ್ನೆ ೨೨೫೦ನ್ನು ತಡೆಹಿಡಿಯಲಾಗಿದೆ

ಇಂಚಲ್ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಕಾಮಗಾರಿಗಳು

೨೨೦೨. ಶ್ರೀ ಶಿವಾನಂದ ಎಚ್. ಕೌಜಲಗಿ(ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಸೌದತ್ತಿ ತಾಲ್ಲೂಕು ಇಂಚಲ ಗ್ರಾಮದಲ್ಲಿ ಎನ್ ಆರ್‌ಡಬ್ಲ್ಯೂಎಸ್ ಕೆಲಸವು ಯಾವಾಗ ಮಂಜೂರಾಯಿತು ಹಾಗೂ ಅದಕ್ಕೆ ಎಷ್ಟು ಹಣಕ್ಕೆ ಆಡಳಿತಾತ್ಮಕ ಮಂಜುರಿ ಕೊಡಲಾಯಿತು ?